

ಪ್ರೀತಿ, ಬೆಂಗಳೂರಿನಲ್ಲಿ ಒಂಟಿಯಾಗಿ ಒದ್ದಾಡುವಾಗ ಬಹಳ ಚೆನ್ನಾಗಿ ಅರ್ಥವಾಗಿತ್ತು. ಅಣ್ಣನ ಪ್ರೀತಿಯ ಆಳ, ಅಗಲಗಳು ಅರಿವಾಗಲು ತಾನು ಊರು ಬಿಟ್ಟು ಬರಬೇಕಾಯಿತಲ್ಲ ಎನಿಸಿತು ಶ್ರೀಕಂಠನಿಗೆ. ನಂಜುಂಡನು, "ಏನಪ್ಪಾ ಶ್ರೀಕಂಠು, ಒಟ್ಟಿನಲ್ಲಿ ಹಳ್ಳಿ ಬಿಟ್ಟು ಬಂದಮೇಲೆ ಸುಖವಾಗಿದ್ದೀಯಲ್ವಾ?" ಎಂದ. "ಓ... ತುಂಬಾ ಸುಖವಾಗಿದೀನಿ" ಎಂದು ಶ್ರೀಕಂಠನು ಹೇಳುತ್ತಿರುವಾಗಲೇ, ಅವನಿಗರಿವಿಲ್ಲದೆ ಭಾವನೆಗಳ ಕಟ್ಟೆ ಒಡೆದಿತ್ತು, ಧ್ವನಿ ಗದ್ಗದಿತವಾಯಿತು. ನಿಯಂತ್ರಣ ತಪ್ಪಿದ ಅವನ ಕಣ್ಣೀರಿನ ಕಟ್ಟೆ ಒಡೆಯಿತು. ಬೆಂಗಳೂರಿಗೆ ಬಂದು ಇಷ್ಟು ದಿನವಾದರೂ ಯಾರೂ ಅಕ್ಕರೆಯಿಂದ ಈ ರೀತಿ ಕೇಳಿರಲಿಲ್ಲ. ಅಣ್ಣನ ಪ್ರೀತಿಯ ಒಂದು ಮಾತಿಗೆ ಶ್ರೀಕಂಠನ ಅಹಂಕಾರ ಕರಗಿ ನೀರಾಗಿ ಹರಿಯತೊಡಗಿತು. ಅತ್ತ ನಂಜುಂಡನ ಕಣ್ಣಿನಿಂದಲೂ ಅಶ್ರುಧಾರೆ ಸುರಿಯತೊಡಗಿತು.

"ನೀವೆಲ್ಲಾ ಇಲ್ಲಿ ಎಷ್ಟೊಂದು ಸುಖವಾಗಿದ್ದೀರಾ ಎಂದು ನಿಮ್ಮನ್ನೆಲ್ಲಾ ನೋಡಿದಾಕ್ಷಣ ತಿಳೀತು" ಎಂದ ನಂಜುಂಡ, "ನೀನೇನೋ ಬೀಜ ಹಾಕ್ಸಿ, ಬರಗಾಲ ಬಂತು ಅಂತ ಊರು ಬಿಟ್ಟು ಬಂದೆ. ಆದರೆ, ಮಳೆ ದೇವ್ರು ನಮ್ಮನ್ನು ಕೈಬಿಡಲಿಲ್ಲ. ನಿನ್ನ ಪಾಲಿನ ಜಮೀನಿನಲ್ಲಿ ಬೆಳೆ ಚೆನ್ನಾಗಿ ಆಗಿ, ನಲವತ್ತು ಮೂಟೆ ಕಡಲೆಕಾಯಿ ಬಂತು. ಅದರ ದುಡ್ಡು ನಿನಗೆ ಕೊಟ್ಟೋಗೋಣ ಅಂತ ಬಂದಿದೀನಿ ಕಣಪ್ಪ" ಎಂದ ನಂಜುಂಡ. ಇದನ್ನು ಕೇಳಿದ ಶ್ರೀಕಂಠನು ಕಂಬನಿ ಸುರಿಸುತ್ತಾ, "ನಾನು ಚಿಕ್ಕೋನು, ತಪ್ಪು ಮಾಡಿದೀನಿ, ಕ್ಷಮಿಸು ನಂಜುಂಡಣ್ಣ" ಎಂದ.

"ನೀನೇನೂ ತಪ್ಪು ಮಾಡಿಲ್ಲ. ಏನೋ ಕೆಟ್ಟಗಳಿಗೆ ಹಾಗಾಯ್ತು. ನಾವೆಲ್ಲಾ ಇರೋವಾಗ ನಿಂಗ್ಯಾಕೆ ಈ ಕಷ್ಟ, ಬಾ ಊರಿಗೆ ಹೋಗೋಣ. ಕಷ್ಟವೋ ಸುಖವೋ ಇಬ್ಬರೂ ಜೊತೆಯಾಗಿರೋಣ" ಎಂದ ನಂಜುಂಡ. ಅಣ್ಣನ ಪ್ರೀತಿಯ ಮಾತಿಗೆ ಏನೂ ಹೇಳಲು ತೋಚದ ಶ್ರೀಕಂಠನ ಗಂಟಲು ಕಟ್ಟಿತ್ತು.

ಅಣ್ಣ-ತಮ್ಮ ವಠಾರದ ಹತ್ತಿರ ಬರುತ್ತಲೇ ಮನೆಯ ಒಳಗಿನಿಂದ ಗೌರಿ ಮತ್ತು ಸಹನಾ ಜೋರಾಗಿ ನಗುತ್ತಾ ಕೇಕೆ ಹಾಕುತ್ತಿರುವುದು ಕೇಳಿ ಬಂತು. ಮನೆಯ ಒಳಗೆ ಬರುತ್ತಲೇ ಗೌರಿಯು ಖುಷಿಯಿಂದ ಅಪ್ಪನಿಗೆ ರೂಬಿಕ್ಸ್ ಕ್ಯೂಬ್ ತೋರಿಸುತ್ತಾ, "ಅಪ್ಪಾ ನೋಡಿಲ್ಲಿ. ಇನ್ಮೇಲೆ ನಾವಿಬ್ರೂ ಸೇರಿ ಇದನ್ನ ಜೋಡುಸ್ತೀವಿ. ಅಕ್ಕ ಇದನ್ನ ನಂಗೇ ಕೊಡ್ತಾಳಂತೆ" ಎಂದು ಅತ್ಯಂತ ಉತ್ಸಾಹದಿಂದ ಹೇಳಿದಳು. ಸಹನಾ ಮತ್ತು ಗೌರಿಯ ಮುಖದಲ್ಲಿ ಎಂದಿಗಿಂತಲೂ ಇಂದು ಹೆಚ್ಚು ನಗು ತುಂಬಿ ತುಳುಕುತ್ತಿತ್ತು. ಸಹನಾಳ ನಗುಮುಖದಲ್ಲಿ ಶ್ರೀಕಂಠನಿಗೆ ತನ್ನ ತಾಯಿಯ ಮುಖ ಕಾಣತೊಡಗಿತು.

●